# * ವೇದಾಂತವು ಶೋಧಕ ವಿಜ್ಞಾನ, ಅದು ಸಂಕುಚಿತ ಸಿದ್ಧಾಂತವಲ್ಲ *

**ಸ್ವಾಮಿ ಮುಖ್ಯಾನಂದ**

ವೇದಾಂತವು ಅನ್ವೇಷಣೆಯನ್ನು ಆಧರಿಸಿದೆ ಎಂಬ ವಿಚಾರವನ್ನು ವಿದ್ವತ್ಪೂರ್ಣವಾಗಿ ತಿಳಿಸಿಕೊಟ್ಟಿರುವ ಲೇಖಕರು ಕೊಲ್ಕತಾದ ಬಳಿಯಿರುವ ರಾಮಕೃಷ್ಣ ಸಂಘದ ಪ್ರಧಾನ ಕೇಂದ್ರ ಬೇಲೂರು ಮಠದಲ್ಲಿರುವ ಹಿರಿಯ ಸ್ವಾಮಿಗಳು. ಅವರು ಹಿಂದೂ ಧರ್ಮವನ್ನು ಕುರಿತು ಉಪಯುಕ್ತ ವ್ಯಾಖ್ಯಾನವುಳ್ಳ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಪ್ರಸಕ್ತ ಲೇಖನವು 'ಪ್ರಬುದ್ಧ ಭಾರತ' ಆಂಗ್ಲ ಪತ್ರಿಕೆಯ ಜನವರಿ ೨೦೦೫ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಅದರ ಸಂಗ್ರಹಾನುವಾದವನ್ನು ಮಾಡಿರುವವರು ಮೈಸೂರಿನ ಡಾ. ಪ್ರಭುಶಂಕರ.

ಬಹುಸಂಖ್ಯೆಯ ವಿಜ್ಞಾನಿಗಳು ಹಾಗೂ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಶಿಕ್ಷಣ ಪಡೆದವರು ತಾಳಿರುವ ಒಂದು ಅಭಿಪ್ರಾಯವುಂಟು: ವಿಜ್ಞಾನ ಎಂದರೆ ಬಾಹ್ಯ ಜಗತ್ತಿನಲ್ಲಿ ಇರುವ ವಸ್ತುಗಳ ಸ್ವರೂಪ, ಸ್ವಭಾವಗಳನ್ನು ಪರಿಶೀಲಿಸುವ ದೃಷ್ಟಿಕೋನ; ಅದು ಪ್ರಯೋಗವನ್ನು ಆಧರಿಸಿದ್ದು; ಮತ್ತು ಆ ದೃಷ್ಟಿಕೋನವು ಕಳೆದ ಕೆಲವು ಶತಮಾನಗಳಲ್ಲಿ ಪಶ್ಚಿಮದೇಶಗಳಲ್ಲಿ ಬೆಳೆದು ಬಂದದ್ದು. ಈ ಭಾವನೆಯು ಅತ್ಯಂತ ಜನಪ್ರಿಯವಾಗಿದೆ. ಅದಕ್ಕೆ ಕಾರಣ ಲೌಕಿಕಕ್ಷೇತ್ರದಲ್ಲಿ ವಿಜ್ಞಾನವು ಪಡೆದಿರುವ ತಾತ್ವಿಕ ಮತ್ತು ತಾಂತ್ರಿಕ ಸಿದ್ಧಿಗಳು. ಇತರ ಕ್ಷೇತ್ರಗಳಲ್ಲಿ ಆಗಿರುವ ಸಾಧನೆಗಳು ಅ-ವಿಜ್ಞಾನ, ಎಂದರೆ ವಿಜ್ಞಾನವಲ್ಲದ್ದು ಎಂದೋ, ಅಥವಾ ವಿಜ್ಞಾನವಿರೋಧಿಯಾದದ್ದು ಎಂದೋ ಅಂಥವರು ಸಾಮಾನ್ಯವಾಗಿ ಭಾವಿಸಿ, ಅವೆಲ್ಲ, ಅದರಲ್ಲೂ ಧಾರ್ಮಿಕ-ಆಧ್ಯಾತ್ಮಿಕ ಕ್ಷೇತ್ರಗಳ ಸಾಧನೆಗಳು, ಮೂಢನಂಬಿಕೆಗಳೆಂದೂ ಹೇಳುವುದುಂಟು.

## ವೇದಾಂತದ ಸಮಗ್ರ ದೃಷ್ಟಿ

ಇಂತಹ ಮನೋಭಾವವು **ನಿಜವಾದ** ವಿಜ್ಞಾನದೃಷ್ಟಿಗೆ ವಿರೋಧಿಯಾದದ್ದು. **ನಿಜವಾದ** ವಿಜ್ಞಾನದೃಷ್ಟಿಯು ಬದುಕಿನ ಮತ್ತು ಅಸ್ತಿತ್ವದ ಪ್ರತಿಯೊಂದು ಕ್ಷೇತ್ರದ ಎಲ್ಲ ವಾಸ್ತವಾಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಅವನ್ನು ಪರೀಕ್ಷೆಗೆ ಒಳಪಡಿಸಬೇಕು. ಪಾಶ್ಚಾತ್ಯ ವಿಜ್ಞಾನವು ತಾನು ಅಧ್ಯಯನ ನಡೆಸುವ ಪ್ರತಿಯೊಂದು ಕ್ಷೇತ್ರದಲ್ಲೂ ಇದೇ ವಿಧಾನವನ್ನು ಅನುಸರಿಸುತ್ತದೆ. ಎಲ್ಲ ಕ್ಷೇತ್ರಗಳಲ್ಲೂ ಇರುವ ಅಸ್ತಿತ್ವದ ಸಮಗ್ರತೆಯನ್ನು ನಿಜವಾದ ವಿಜ್ಞಾನವು ಗಮನಕ್ಕೆ ತೆಗೆದುಕೊಳ್ಳಬೇಕು. ಎಲ್ಲ ಕ್ಷೇತ್ರಗಳೂ ಎಂದರೆ ಮಾನವನು ಅನುಭವಕ್ಕೆ ತಂದುಕೊಳ್ಳುವ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ವಲಯಗಳು. ಈ ದೃಷ್ಟಿಕೋನದಿಂದ ನೋಡಿದಾಗ ಪಾಶ್ಚಾತ್ಯ ವಿಜ್ಞಾನವು **ಅಪೂರ್ಣ** ವಿಜ್ಞಾನ. ಇಂದ್ರಿಯಗಳ ಅನುಭವಕ್ಕೆ ಬರುವ ಕ್ಷೇತ್ರಗಳನ್ನು ಮಾತ್ರ ಅದು ಪರಿಗಣಿಸುತ್ತದೆ. ಹೀಗಾಗಿ ಬಾಹ್ಯ ಜಗತ್ತನ್ನು ಕುರಿತಂತೆ ಅನೇಕ **ಅಪೂರ್ಣ** ವೈಜ್ಞಾನಿಕ ದೃಷ್ಟಿಗಳಿರುವುದು ಸಾಧ್ಯ ಎಂದಾಯಿತು. ಭಾಗಶಃ ಅವು ಸರಿ ಎಂದೂ ಹೇಳಬಹುದು. ಪಾಶ್ಚಾತ್ಯ ವಿಜ್ಞಾನದಲ್ಲಿನ ದ್ವಿವಿಭಜನೆ (ಪರಸ್ಪರ ವಿರುದ್ಧವಾದ ಎರಡು ಭಾಗಗಳಾಗಿ ಒಡೆಯುವ), **ಅಪೂರ್ಣ** ಮತ್ತು ಸರಳೀಕರಣಗೊಳಿಸುವ ಕ್ರಿಯೆಗಳು ಸತ್ಯದ ಅನಂತ ಮುಖಗಳಲ್ಲಿ ಮುಖ್ಯವಾದ ಅನೇಕ ಅಂಶಗಳನ್ನು ಗಮನಿಸದೇ ಇರುವುದು ಸಾಧ್ಯ. ಉದಾಹರಣೆಗೆ, ಮಾನವನ ವ್ಯಕ್ತಿತ್ವ ಮತ್ತು ಅವನ ಅಂತರಂಗದ ಅಸ್ತಿತ್ವ ಇವುಗಳನ್ನೇ—ಅವು ತಾನೆ ಎಲ್ಲ ಪರೀಕ್ಷೆಗಳ ಮತ್ತು ಜ್ಞಾನದ ಕೇಂದ್ರ—ಗಮನಿಸದೇ ಹೋಗಬಹುದು. ಭಗವದ್ಗೀತೆಯು (೧೩. ೨-೬) ಹೀಗೆ ಹೇಳುತ್ತದೆ: ಹೊರಗಿನ ದೃಶ್ಯಜಗತ್ತನ್ನು ಹಾಗೂ ಅಂತರಂಗ ಕ್ಷೇತ್ರದ ಸ್ವಾನುಭವ ಅಥವಾ ಎಲ್ಲವನ್ನೂ ತಿಳಿಯುವ, ಅನುಭವಿಸುವ ಚೈತನ್ಯವನ್ನೂ ಒಳಗೊಂಡ ಪೂರ್ಣಜ್ಞಾನವೇ ನಿಜವಾದ ಜ್ಞಾನ.

ಇದು ವೇದಾಂತದ ವಿಶೇಷ ಕ್ಷೇತ್ರ—ಒಳಗು ಹೊರಗು ಎರಡನ್ನೂ ತಿಳಿಯುವುದು, ತಿಳಿಯುವವನು ಹಾಗೂ ತಿಳಿಯಬೇಕಾದದ್ದು—ಎರಡರ ಜ್ಞಾನವನ್ನೂ ಸಂಪಾದಿಸುವುದು. ಉಳಿದ ವಿಜ್ಞಾನಗಳಂತೆ ವೇದಾಂತವೂ ಸಂಶೋಧನಾತ್ಮಕ ವಿಜ್ಞಾನವೇ ಹೌದು. ಆದರೆ ಇದು ಶೋಧಿಸಲು ಹೊರಟಿರುವ ಕ್ಷೇತ್ರವೇ ಬೇರೆ. ಆದ್ದರಿಂದ ಇದಕ್ಕೆ ತನ್ನದೇ ಆದ ವಿಧಿವಿಧಾನಗಳುಂಟು. ಹಾಗೆಯೇ ತನ್ನದೇ ಆದ ಸಂಶೋಧಕ ಉಪಕರಣಗಳೂ ಉಂಟು. ತಮ್ಮ ವಿವೇಕ ಚೂಡಾಮಣಿಯಲ್ಲಿ (೨೮೧) ಶ್ರೀಶಂಕರಾಚಾರ್ಯರು ಹೀಗೆ ಹೇಳುತ್ತಾರೆ: "ಶ್ರುತಿಯಿಂದಲೂ, ಯುಕ್ತಿಯಿಂದಲೂ, ಸ್ವಾನುಭವದಿಂದಲೂ ಆತ್ಮನ ಸರ್ವಾತ್ಮಕತ್ವವನ್ನು ತಿಳಿದುಕೊಂಡು ಅಕಸ್ಮಾತ್ತಾಗಿ ತೋರಿಕೆಯಿಂದ ನಿನ್ನಲ್ಲಿ ಉಂಟಾದ ಅಧ್ಯಾಸವನ್ನು ಹೋಗಲಾಡಿಸಿಕೊ." ಭೌತಶಾಸ್ತ್ರ ಮತ್ತು ಖಗೋಳವಿಜ್ಞಾನಗಳಿಗೆ ತಮ್ಮದೇ ಆದ ಸಂಶೋಧನಾ ಕ್ಷೇತ್ರಗಳುಂಟು. ಹಾಗೆಯೇ ತಮ್ಮದೇ ಆದ ವಿಶೇಷ ಸಂಶೋಧನಾ ಪರಿಕರಗಳುಂಟು. ವೇದಾಂತದ ಪ್ರಕಾರ ಈಗಾಗಲೇ ಅಸ್ತಿತ್ವದಲ್ಲಿರುವ ಸತ್ಯಗಳನ್ನೂ ವಸ್ತುಗಳನ್ನೂ ಶೋಧನೆಯಿಂದಲೂ, ಅನುಭವದಿಂದಲೂ ಕಂಡುಕೊಳ್ಳಬೇಕೇ ವಿನಃ ಊಹೆಗಳಿಂದಲ್ಲ.

ವಿಖ್ಯಾತ ಫ್ರೆಂಚ್ ಇತಿಹಾಸಕಾರ ಅಮೋರಿ ಡ ರೆಯಿನ್ಕೋರ್ಟ್ ತನ್ನ *The Eye of Shiva : Eastern Mysticism and Science* ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾನೆ: "ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರಿಂದ ಪ್ರಚೋದಿತವಾದ ಆಧುನಿಕ ಜಾಗೃತಿಯಿಂದಾಗಿ ಪೌರ್ವಾತ್ಯ ಅನುಭಾವವು ವಿಜ್ಞಾನ ಮತ್ತು ತಂತ್ರಜ್ಞಾನಗಳು ನೀಡಿದ, ಅತ್ಯಂತ ಬೇರೆಯದೇ ಆದ ಸಾಂಸ್ಕೃತಿಕ ಚೌಕಟ್ಟಿಗೆ ಹೊಂದಿಕೊಳ್ಳತೊಡಗಿದೆ. ಹಾಗೆ ಮಾಡುವಾಗ ಪೌರ್ವಾತ್ಯ ಅನುಭಾವವು ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ತನ್ನ ಸಾಂಪ್ರದಾಯಿಕ ಅರಿವಿನಲ್ಲಿ ಮೌಲಿಕವಾದ ಯಾವುದೇ ಅಂಶವನ್ನು ಬಲಿಕೊಡಬೇಕಾಗಿಬರಲಿಲ್ಲ."

### ಅಭಿಪ್ರಾಯ ಮತ್ತು ಶೋಧನೆ ಆಧಾರಿತ ಜ್ಞಾನ

ಬ್ರಹ್ಮಸೂತ್ರಗಳು ಉಪನಿಷತ್ತುಗಳನ್ನು ಆಧಾರವಾಗಿ ಉಳ್ಳ ತತ್ತ್ವಗ್ರಂಥ. ಬ್ರಹ್ಮನ ಸ್ವರೂಪವನ್ನು ಕುರಿತು ತರ್ಕಬದ್ಧವಾಗಿ ವಿಚಾರವನ್ನು ನಡೆಸುವುದು ಅದರ ಗುರಿ (ಬ್ರಹ್ಮ ಜಿಜ್ಞಾಸಾ). ಆ ಬ್ರಹ್ಮವೋ ಅನಂತ ಆಧ್ಯಾತ್ಮಿಕ ಸತ್ಯ. ಅದು ವಿಶ್ವದ ಎಲ್ಲದರ ಆಧಾರ ಹಾಗೂ ಮೂಲ; ಆತ್ಮದ ಸ್ವರೂಪದಲ್ಲಿ ಎಲ್ಲ ಜೀವಿಗಳಲ್ಲಿಯೂ ಅಡಗಿರುವಂಥದು. ಸುಮಾರು ಕ್ರಿ.ಶ. ಏಳನೆಯ ಶತಮಾನದಲ್ಲಿದ್ದ (ಕೆಲವರ ಪ್ರಕಾರ ಇನ್ನೂ ಹಿಂದೆ ಇದ್ದ) ಆಚಾರ್ಯ ಶಂಕರರು ಬ್ರಹ್ಮಸೂತ್ರಗಳಿಗೆ ಭಾಷ್ಯ ಬರೆದಿದ್ದಾರೆ. ಅದರಲ್ಲಿ ಅವರು ಸ್ಪಷ್ಟವಾಗಿ ಗ್ರಹಿಸಲು ಆಗದೇ ಹೋದ ಭೌತಿಕ ವಸ್ತುವಿನ ವಿಷಯದಲ್ಲಿಯೂ ಎರಡು ದೃಷ್ಟಿಗಳಿರುವುದು ಸಾಧ್ಯ ಎಂದು ಹೇಳಿದ್ದಾರೆ. ೧. **ಪುರುಷ-ತಂತ್ರ** ಎಂದರೆ ವ್ಯಕ್ತಿಗಳ ಅಭಿಪ್ರಾಯಗಳನ್ನು ಆಧರಿಸಿದ ದೃಷ್ಟಿ. ೨. **ವಸ್ತು-ತಂತ್ರ** ಎಂದರೆ ಶೋಧನೆ ನಡೆಸಿ ವಸ್ತುವಿನ ಸ್ವಭಾವವನ್ನು ನಿರ್ಣಯಿಸುವ ದೃಷ್ಟಿ. ಅವರ ಮಾತುಗಳಲ್ಲೇ (ಬ್ರಹ್ಮಸೂತ್ರ ಭಾಷ್ಯ ೧.೧.೨) ಹೇಳುವುದಾದರೆ: "ಭೂತವಸ್ತುವಿನ (ಎಂದರೆ ಅಸ್ತಿತ್ವದಲ್ಲಿರುವ ವಸ್ತುವಿನ) ವಿಷಯದಲ್ಲಿ 'ಅದು ಹಾಗಿದೆ', 'ಅದು ಹಾಗಲ್ಲ', 'ಅದು ಅಲ್ಲಿದೆ', 'ಅದು ಅಲ್ಲಿಲ್ಲ', ಎಂಬ ಭಿನ್ನಾಭಿಪ್ರಾಯಗಳು ಇರಬಲ್ಲವು. ಆದ್ದರಿಂದ ಅದು ನಿಜವಾದ ಜ್ಞಾನವಲ್ಲ (ತತ್ತ್ವಜ್ಞಾನವಲ್ಲ), ಏಕೆಂದರೆ ಅಂತಹ ಹೇಳಿಕೆಗಳೆಲ್ಲ ವೈಯಕ್ತಿಕ ಅಭಿಪ್ರಾಯಗಳನ್ನು (ಪುರುಷ-ತಂತ್ರ) ಅವಲಂಬಿಸಿರುತ್ತವೆ. ಆದರೆ ಅಸ್ತಿತ್ವದಲ್ಲಿರುವ ಒಂದು ವಸ್ತುವಿನ ನಿಜವಾದ ಜ್ಞಾನವು ಅಂತಹ ಭಿನ್ನಾಭಿಪ್ರಾಯಗಳನ್ನು ಅವಲಂಬಿಸಿರುವುದಿಲ್ಲ. ಏಕೆಂದರೆ ಅಂತಹ ಅಭಿಪ್ರಾಯಗಳು ಮಿಥ್ಯಾಜ್ಞಾನವನ್ನು ಅವಲಂಬಿಸಿರುತ್ತವೆ. ನಿಜವಾದ ಜ್ಞಾನವು ವಸ್ತುವಿನ ಯಥಾರ್ಥ ಸ್ವರೂಪವನ್ನು ಮಾತ್ರವೇ ಅವಲಂಬಿಸಿರುತ್ತದೆ. ಅದು ವಸ್ತು-ತಂತ್ರಜ್ಞಾನ. ಅದು ಶೋಧನೆಯಿಂದಲೂ ಸ್ವಾನುಭವದಿಂದಲೂ ಪ್ರಾಪ್ತವಾಗುತ್ತದೆ."

ಮುಂದುವರಿದು ಶಂಕರರು ಹೇಳುತ್ತಾರೆ: "ಆದ್ದರಿಂದ ಅಸ್ತಿತ್ವದಲ್ಲಿರುವ ವಸ್ತುಗಳಿಗೆ ಪ್ರಮಾಣವು 'ವಸ್ತು-ತಂತ್ರ'ವಾದದ್ದು. ಹೀಗಾಗಿ ಅಸ್ತಿತ್ವದಲ್ಲಿರುವ ಬ್ರಹ್ಮಕ್ಕೆ ಸಂಬಂಧಿಸಿದ ಜ್ಞಾನವೂ 'ವಸ್ತು-ತಂತ್ರ'ವೇ ಹೊರತು ನಮ್ಮ ಅಭಿಪ್ರಾಯಗಳನ್ನು ಅವಲಂಬಿಸಿದ್ದಲ್ಲ. ಆದುದರಿಂದ ಅದು ಹೇಗಿದೆಯೋ ಹಾಗೆಯೇ ಪರಿಶೀಲಿಸಲ್ಪಟ್ಟು ಸಾಕ್ಷಾತ್ಕರಿಸಿಕೊಳ್ಳಬೇಕಷ್ಟೇ ಹೊರತು ಅದರ ವಿಷಯದಲ್ಲಿ ಊಹಾಪೋಹಗಳನ್ನು ಮಾಡತಕ್ಕದ್ದಲ್ಲ. ಏಕೆಂದರೆ ಬ್ರಹ್ಮಜ್ಞಾನವು, ಸ್ವತಃ ಅಸ್ತಿತ್ವದಲ್ಲಿರುವ ವಿಷಯವಾದುದರಿಂದ, ಅನುಭವದಲ್ಲಿ ಪರ್ಯವಸಾನವಾಗತಕ್ಕದ್ದು."

ಆದ್ದರಿಂದ ಬ್ರಹ್ಮದ ಸ್ವರೂಪವನ್ನು ಈಗಾಗಲೇ ನಿಷ್ಕರ್ಷಿಸಿರುವ ಮಾರ್ಗಗಳಿಂದ ಕಂಡುಹಿಡಿದುಕೊಳ್ಳಬೇಕು. ಅಲ್ಲದೆ ಪ್ರತಿಯೊಬ್ಬರ ಅನುಭವಕ್ಕೆ ಬರುವ ಎಚ್ಚರ, ಸ್ವಪ್ನ ಮತ್ತು ಗಾಢನಿದ್ರೆ ಎಂಬ ಮೂರು ಅವಸ್ಥೆಗಳನ್ನು ಬುದ್ಧಿಪೂರ್ವಕವಾಗಿ ವಿಶ್ಲೇಷಿಸಿ ವಸ್ತುಸ್ವರೂಪವನ್ನು ತಿಳಿಯುವ ನೇರವಾದ, ವೈಜ್ಞಾನಿಕ ವಿಧಾನವೂ ಇದ್ದೇ ಇದೆಯಷ್ಟೆ.

ಶೋಧನೆಯ ಮಾರ್ಗದಲ್ಲಿ ವಿಚಾರ ಎಂಬುದು ಸಹಾಯಕವಾಗಬಲ್ಲುದು. ವಿಚಾರವನ್ನು ಶೋಧಕ ಕಾರ್ಯಕ್ಕೆ ಬಳಸಲೂಬಹುದು. ಆದರೆ ವಿಚಾರ ಎನ್ನುವುದೇ ಸತ್ಯವಸ್ತುವನ್ನು ಸೃಷ್ಟಿ ಮಾಡಲಾರದು. ಅಷ್ಟೇ ಅಲ್ಲ ವಿಚಾರವು ಇರುವ ಸತ್ಯವಸ್ತುಗಳನ್ನು ಇಲ್ಲದಂತೆ ಮಾಡಲಾರದು. ಸತ್ಯವಸ್ತುಗಳು—ಇಂದ್ರಿಯಗ್ರಾಹ್ಯವಾದುದಾಗಲಿ, ಇಂದ್ರಿಯಾತೀತವಾಗಿ ಗ್ರಾಹ್ಯವಾಗುವಂಥದಾಗಲಿ ಅವು ತಮ್ಮ ಸಹಜ ಸ್ವಭಾವದಿಂದ ಇದ್ದೇ ತೀರುತ್ತವೆ. ಅವುಗಳನ್ನು ಕಂಡುಕೊಳ್ಳಬೇಕಷ್ಟೆ.

### ವೇದಾಂತವು ಮುಕ್ತವೂ, ಸದಾ ಬೆಳೆಯುತ್ತಲೇ ಇರುವಂಥದೂ ಆದ ವ್ಯವಸ್ಥೆ

ವೇದಾಂತವು ಆಧುನಿಕ ವಿಜ್ಞಾನದಂತೆ ಒಂದು ಮುಕ್ತ ವ್ಯವಸ್ಥೆ. ತನ್ನ ಕ್ಷೇತ್ರದಲ್ಲೂ ಇತರ ಕ್ಷೇತ್ರಗಳಲ್ಲೂ ನಡೆಯುವ ಪ್ರಗತಿಯ ಬೆಳಕಿನಲ್ಲಿ, ತನ್ನಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ, ಅನುಭವವನ್ನು ಆಧರಿಸಿದ ಜ್ಞಾನವನ್ನು ಪಡೆಯುವ ತನ್ನ ದೃಷ್ಟಿಕೋನ

ಗಳನ್ನು ಬದಲಾಯಿಸಿಕೊಳ್ಳುತ್ತಾ ಹೋಗುವ ಪ್ರವೃತ್ತಿ ಅದರದ್ದಾಗಿತ್ತು. ಇದರೊಂದಿಗೆ ಸಮಗ್ರ ಜ್ಞಾನದ ಜೊತೆಗೆ ಸಮೀಕರಿಸುವ ಪ್ರಕ್ರಿಯೆಯೂ ಇತ್ತು. ಆದರೆ ಐತಿಹಾಸಿಕ ಕಾರಣಗಳಿಂದ ಒದಗಿದ ಏರಿಳಿತಗಳಿಂದಾಗಿ—ಉದಾಹರಣೆಗೆ ರಾಜಕೀಯ ದಾಸ್ಯ, ಸಾಮಾಜಿಕ ಅಲ್ಲೋಲಕಲ್ಲೋಲಗಳು ಮುಂತಾದವು—ಅದರ ಶೋಧನಾಪ್ರವೃತ್ತಿ ಮತ್ತು ಹೊಸ ಜ್ಞಾನವನ್ನು ತನ್ನೊಳಕ್ಕೆ ಸೇರಿಸಿಕೊಳ್ಳುವಿಕೆ, ಇವು ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದುವು. ಯೂರೋಪಿನಲ್ಲಿ ಗ್ರೀಕ್ ಚಿಂತನೆ ಮಸುಕಾದಾಗ ಕತ್ತಲಯುಗ ಬಂದ ಹಾಗೇ ಇಲ್ಲೂ ಆಯಿತು. ಪರಿಣಾಮವಾಗಿ ಕೆಲವು ಶತಮಾನಗಳ ಕಾಲ ವೇದಾಂತವು ನಿಂತ ನೀರಾಯಿತು. ಅದರೆ ಈಚಿನ ದಿನಗಳಲ್ಲಿ ಮೊದಲಿನ ಸಂಶೋಧನಾಪ್ರವೃತ್ತಿ ಜಾಗೃತವಾಗಿದೆ. ಈಗ ನಾವು ವೇದಾಂತವನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸಬಹುದು. ಹಾಗೆ ಮಾಡುವುದು, ಅನುಭವಜನ್ಯ ಜ್ಞಾನದ ಕ್ಷೇತ್ರದಲ್ಲಿ, ವಿಜ್ಞಾನವು ಹೊಸದಾಗಿ ಕಂಡುಹಿಡಿಯುತ್ತಿರುವ ಹೊಸ ಸತ್ಯಗಳ ಬೆಳಕಿನಲ್ಲಿ; ಕೆಲವು ವಿಜ್ಞಾನಿಗಳು ಮಂಡಿಸುವ ಊಹಾಪೋಹಗಳನ್ನು ಆಶ್ರಯಿಸಿ ಅಲ್ಲ. ವಿಜ್ಞಾನವು ಮಾಡುತ್ತಿರುವ ಹೊಸ ಆವಿಷ್ಕಾರಗಳು ಕೂಡ ತಾತ್ಪೂರ್ತಿಕ ಸತ್ಯಗಳಾಗಿರಬಹುದು. ಅವುಗಳನ್ನು ವೇದಾಂತವು ತನ್ನ ವ್ಯವಸ್ಥೆಗೆ ಸೇರಿಸಿಕೊಳ್ಳಬೇಕಾದರೆ ಅವೂ ಕೂಡ ಸಮಗ್ರ ಸತ್ಯದ ಚೌಕಟ್ಟಿಗೆ ಹೊಂದಿಕೊಳ್ಳುವಂಥವಾಗಿರಬೇಕು.

ಸ್ವಾಮಿ ವಿವೇಕಾನಂದರು ಮಾಡಲು ಪ್ರಯತ್ನಿಸಿದ್ದು ಇದನ್ನೇ. ಪಶ್ಚಿಮದಲ್ಲಿ ಅವರು ವೇದಾಂತವನ್ನು ವೈಜ್ಞಾನಿಕ ತತ್ತ್ವದರ್ಶನವೆಂದು ಪ್ರತಿಪಾದಿಸಿದರು. ವಿಜ್ಞಾನಿಗಳಿದ್ದ ಸಭೆಯಲ್ಲಿ ಅವರು ಅದೇ ಮಾತನ್ನು ಹೇಳಿದರು. ವೇದಾಂತದ ಸಮಗ್ರ ಸ್ವರೂಪವನ್ನು, ಅದು ಲೌಕಿಕ-ಅಲೌಕಿಕಗಳೆರಡನ್ನೂ ಸಮನ್ವಯಗೊಳಿಸುತ್ತದೆ ಎಂಬುದನ್ನು ನಿರೂಪಿಸಿದರು. ಅಷ್ಟೇಕೆ, ಅವರು ಷಿಕಾಗೋದಲ್ಲಿ ೧೮೯೩ರಲ್ಲಿ ಸಮಾವೇಶಗೊಂಡಿದ್ದ ಸರ್ವಧರ್ಮಸಮ್ಮೇಳನದಲ್ಲಿ ಮತ್ತೊಂದು ವಿಷಯವನ್ನು ಒತ್ತಿಹೇಳಿದರು. (ಹತ್ತೊಂಬತ್ತನೆಯ ಶತಮಾನದ) ಆಧುನಿಕ ವಿಜ್ಞಾನದ ಆವಿಷ್ಕಾರಗಳು ವೇದಾಂತಶಾಸ್ತ್ರದ ಉನ್ನತ ಆಧ್ಯಾತ್ಮಿಕ ಭಾವನೆಗಳ ಪ್ರತಿಧ್ವನಿಗಳಂತೆ ತೋರುತ್ತಿವೆ ಎಂಬುದೇ ಅದು. ಅಣುಭೌತಶಾಸ್ತ್ರವು (microphysics) ಮುಂದುವರಿದಂತೆಲ್ಲ ಆಧುನಿಕ ವಿಜ್ಞಾನವು ಪೌರ್ವಾತ್ಯ ಚಿಂತನೆಗೆ ಸಮೀಪವಾಗಿದೆ ಎಂಬುದನ್ನು ನಾವು ಕಾಣಬಹುದು. ಟಾವೊ ಆಫ್ ಫಿಸಿಕ್ಸ್ ಎಂಬ ಪುಸ್ತಕದಲ್ಲಿ ಪ್ರೊ. ಕಾಪ್ರ ಹೇಳುತ್ತಾರೆ: "ಜಗತ್ತನ್ನು ಕುರಿತಂತೆ ಪೂರ್ವ ದೇಶಗಳು ತಾಳಿರುವ ಮೂಲಭೂತ ದೃಷ್ಟಿಯೂ ಆಧುನಿಕ ಭೌತಶಾಸ್ತ್ರವು ತಾಳಿರುವ ದೃಷ್ಟಿಯೂ ಒಂದೇ ಆಗಿದೆ. ಪೌರ್ವಾತ್ಯ ಚಿಂತನೆಯು, ಅದರಲ್ಲೂ ಪೌರ್ವಾತ್ಯ ಅನುಭಾವ ಚಿಂತನೆಯು, ಸಮಕಾಲೀನ ವಿಜ್ಞಾನದ ಸಿದ್ಧಾಂತಗಳಿಗೆ ಸುಸಂಬದ್ಧವಾದ ತಾತ್ತ್ವಿಕ ಹಿನ್ನೆಲೆಯನ್ನು ಒದಗಿಸುತ್ತದೆ.

"ವಸ್ತುಗಳ ಸಾರಸ್ವರೂಪದ ಮೊದಲ ಹೊಳಹುಗಳನ್ನು ವಿಜ್ಞಾನಿಗಳಿಗೆ ದೊರಕಿಸಿಕೊಟ್ಟದ್ದು ಪರಮಾಣು ಭೌತವಿಜ್ಞಾನ. ಅನುಭಾವಿಗಳಂತೆ ವಿಜ್ಞಾನಿಗಳೂ ಸದ್ವಸ್ತುವಿನ ವಿಷಯದಲ್ಲಿ ಇಂದ್ರಿಯಾತೀತವಾದ ಅನುಭವವನ್ನು ಕುರಿತು ಪ್ರಸ್ತಾವಿಸತೊಡಗಿದರು. ಅನುಭಾವಿಗಳಂತೆ ವಿಜ್ಞಾನಿಗಳೂ ಈ ಅನುಭವದ ವಿರೋಧಾಭಾಸದ ಮುಖಗಳನ್ನು ಎದುರಿಸಬೇಕಾಯಿತು. ಹೀಗಾಗಿ, ಆಗಿನಿಂದ ಆಧುನಿಕ ಭೌತವಿಜ್ಞಾನವು ಸೃಷ್ಟಿಸಿದ ಮಾದರಿಗಳೂ ಪ್ರತಿಮೆಗಳೂ ಪೌರ್ವಾತ್ಯ ತತ್ತ್ವಶಾಸ್ತ್ರವು ಒದಗಿಸಿದ ಮಾದರಿಗಳಿಗೂ ಪ್ರತಿಮೆಗಳಿಗೂ ಸದೃಶವಾದುವುಗಳೇ ಆಗಬೇಕಾಯಿತು.

"ಹೀಗಾಗಿ ಅನುಭಾವಿ ಮತ್ತು ಭೌತಶಾಸ್ತ್ರಜ್ಞ ಇಬ್ಬರೂ ಒಂದೇ ತೀರ್ಮಾನಕ್ಕೆ ಬಂದರು. ಒಬ್ಬರು ಅಂತರಂಗದ ವಲಯದಿಂದ ಹೊರಟರೆ ಮತ್ತೊಬ್ಬರು ಹೊರಪ್ರಪಂಚದಿಂದ ತಮ್ಮ ಅನ್ವೇಷಣಾಯಾತ್ರೆಯನ್ನು ಪ್ರಾರಂಭಿಸಿದರು. ಅವರ ದೃಷ್ಟಿಕೋನಗಳ ಸಾಮರಸ್ಯವು ಭಾರತೀಯ ಜ್ಞಾನದ ಈ ಅಂಶವನ್ನು ಸ್ಥಿರೀಕರಿಸಿತು: ಬಾಹ್ಯದ ಆತ್ಯಂತಿಕ ಸತ್ಯವಾದ ಬ್ರಹ್ಮವೂ, ಅಂತರಂಗದ ಸತ್ಯವಾದ ಆತ್ಮವೂ ಒಂದೇ."

ಪಶ್ಚಿಮದ ತತ್ತ್ವಶಾಸ್ತ್ರಗಳಂತೆ, ವೇದಾಂತವು ಒಬ್ಬ ವ್ಯಕ್ತಿಯ ಊಹಾತ್ಮಕ ತತ್ತ್ವಶಾಸ್ತ್ರವಲ್ಲ. ಆದ್ದರಿಂದ ಅದು ಊಹಾತ್ಮಕ ತತ್ತ್ವಶಾಸ್ತ್ರದ ಮುಗಿದ ಚಿಂತನೆಯ ಶಾಖೆ ಎಂದು ಭಾವಿಸುವುದು ತಪ್ಪಾಗುತ್ತದೆ. ವೇದಾಂತವು ಪ್ರಾಚೀನ ಕಾಲದಿಂದಲೂ, ಋಷಿಗಳ, ದಾರ್ಶನಿಕರ ತತ್ತ್ವಮಂಥನ ಮತ್ತು ಸತ್ಯಸಾಕ್ಷಾತ್ಕಾರಗಳ ಆಧಾರದ ಮೇಲೆ ಸ್ಥಾಪಿತವಾಗಿದೆ. ಅಲ್ಲದೆ ಅದಕ್ಕೆ ಅನುಸ್ಯೂತವಾದ ಇತಿಹಾಸವಿದೆ. ಆಧುನಿಕ ವಿಜ್ಞಾನದಂತೆಯೇ ಹೊಸ ಹೊಸ ಪುರಾವೆಗಳು ದೊರೆತಂತೆಲ್ಲಾ ಅದು ಬೆಳೆಯುತ್ತಾ, ಬದಲಾಗುತ್ತಾ ಹೋಗಿದೆ. ಅದಕ್ಕೆ ಅನೇಕರ ಸಹಕಾರಾತ್ಮಕ ಕೊಡುಗೆಗಳು ಸಂದಿವೆ. ಅನೇಕರ ತರ್ಕದ ಮೂಷೆಯಲ್ಲಿ ಅದು ಬೆಂದಿದೆ, ಪುಟಗೊಂಡಿದೆ; ಜೊತೆಗೆ ಅನೇಕರ ಆಧ್ಯಾತ್ಮಿಕ ದರ್ಶನಗಳಿಂದ ಅದು ಪುಷ್ಟಿಗೊಂಡಿದೆ.

### ಜ್ಞಾನದ ವಿವಿಧ ಪ್ರಕಾರಗಳು

ಪ್ರಮಾಣದ ಒಂದೊಂದು ಪ್ರಕಾರಕ್ಕೂ, ಅದು ಕಾರ್ಯ ನಿರ್ವಹಿಸುವ ವಿಶಿಷ್ಟವಾದ ಕ್ಷೇತ್ರವಿದೆ. ಆ ಕ್ಷೇತ್ರದಲ್ಲಿ ಅದರದೇ ಪರಮಾಧಿಕಾರ. ಅಲ್ಲಿ ಅದು ಪೂರ್ಣವಾಗಿ ತರ್ಕಬದ್ಧವಾದದ್ದು. ಅದ್ವೈತವೇದಾಂತದ ಪರಮ ಪ್ರತಿಪಾದಕರಾದ ಆಚಾರ್ಯ ಶಂಕರರು ಹೀಗೆಂದು ಧೈರ್ಯವಾಗಿ ಹೇಳಿದರು:

"ತಾತ್ತ್ವಿಕ ಸತ್ಯಗಳನ್ನೂ ಪರಮ ಸತ್ಯವನ್ನೂ ಅನುಭೂತಿಗಳನ್ನೂ ಋಷಿಗಳಿಗೆ ಧ್ಯಾನದಲ್ಲಿ ಗೋಚರಗೊಳಿಸಿದ ಶ್ರುತಿಗೆ ತನ್ನದೇ ಆದ ಕಾರ್ಯವಲಯವುಂಟು. ಅಲ್ಲದೆ ಲೌಕಿಕಾನುಭವದ ಕ್ಷೇತ್ರದಲ್ಲಿ ಅದನ್ನು ಆಧರಿಸಿದ ಇಂದ್ರಿಯಾನುಭವ, ತರ್ಕ ಇವಕ್ಕೂ ತಮ್ಮದೇ ಆದ ಕ್ಷೇತ್ರವುಂಟು. ಪ್ರತಿಯೊಂದು ಕ್ಷೇತ್ರದಲ್ಲೂ ಅದಕ್ಕೆ ವಿಶಿಷ್ಟವಾದ ಪ್ರಮಾಣವು ಕಾರ್ಯನಿರತವಾಗಿದ್ದು ಅದರದೇ ಆದ ಸಾರ್ವಭೌಮತ್ವವಿರುತ್ತದೆ. ದೃಶ್ಯದ ಕ್ಷೇತ್ರದಲ್ಲಿ ಕಣ್ಣುಗಳೇ ಪರಮ ಪ್ರಮಾಣ; ಹಾಗೆಯೇ ಶಬ್ದಪ್ರಪಂಚದಲ್ಲಿ ಕಿವಿಗಳೇ ಪರಮ ಪ್ರಮಾಣ. ಒಂದು ಇನ್ನೊಂದರ ಕಾರ್ಯವನ್ನು ನಿರ್ವಹಿಸಲಾರದು. ಒಳ್ಳೆಯ ಸಂಗೀತದ ವಿಷಯದಲ್ಲಿ ಕಿವಿಗಳು ನೀಡುವ ಜ್ಞಾನ—ಉದಾಹರಣೆಗೆ ಇದು ಉತ್ಕೃಷ್ಟವಾದ ನಾದ ಎಂಬ ಅನುಭವ, ಕಣ್ಣುಗಳು ನೀಡುವ ಜ್ಞಾನ—ಉದಾಹರಣೆಗೆ ಹಾಡುತ್ತಿರುವ ವಿದುಷಿ ಸುಂದರಿ ಎಂಬ ಅನುಭವ—ಇವುಗಳ ನಡುವೆ ಪರಸ್ಪರ ವಿರೋಧವಿಲ್ಲ. ಅವೆರಡೂ ಬೇರೆ ಬೇರೆ ಇಂದ್ರಿಯಗಳು ನೀಡಿದ ಜ್ಞಾನವೇ ಆಗಿದ್ದರೂ ಅಲ್ಲಿ ವಿರೋಧ ತೋರುವುದಿಲ್ಲ. ಹಾಗೆಯೇ ಮಾನವನು ಭೌತಿಕ ಹಾಗೂ ಆಧ್ಯಾತ್ಮಿಕ ಅನುಭವಗಳನ್ನು, ಅವುಗಳಿಗೆ ಸಂಬಂಧಿಸಿದ ಜ್ಞಾನವನ್ನು, ಇಂದ್ರಿಯಗಳು, ಬುದ್ಧಿ, (intuition) ಸಮಾಧಿ – ಅನುಭಾವ ಮುಂತಾದ ವಿವಿಧ ಮೂಲಗಳಿಂದ ಪಡೆಯುತ್ತಾನೆ. ಆಧ್ಯಾತ್ಮಿಕ ಅನುಭೂತಿಗೆ ಸಂಬಂಧಿಸಿದಂತೆ ಇಂದ್ರಿಯಾನುಭವವು ಪ್ರಮಾಣವಾಗುವುದು ಸಾಧ್ಯವಿಲ್ಲ. ಭೂಮಿಗೆ ಸಂಬಂಧಿಸಿದಂತೆ ಹಗಲು ರಾತ್ರಿಗಳಿವೆ. ಆದರೆ ಸದಾ ಸ್ವಯಂ ಪ್ರಕಾಶವಾಗಿರುವ ಸೂರ್ಯನ ಪಾಲಿಗೆ ಹಗಲು ರಾತ್ರಿಗಳಿಲ್ಲ. ಆದ್ದರಿಂದ ಪ್ರತಿಯೊಂದು ಕ್ಷೇತ್ರಕ್ಕೆ ಸಂಬಂಧಿಸಿದ ಜ್ಞಾನಕ್ಕೂ ಅದಕ್ಕೆ ಸಂಬಂಧಪಟ್ಟ ಪ್ರಮಾಣವನ್ನೂ ಪ್ರಕ್ರಿಯೆಯನ್ನೂ ಅವಲಂಬಿಸಬೇಕೇ ಹೊರತು, ಇನ್ನಾವುದೋ ಕ್ಷೇತ್ರದಲ್ಲಿ ವಿಶ್ವ ವಿಖ್ಯಾತನಾದವನೊಬ್ಬನ ಪ್ರಮಾಣವನ್ನಾಗಲಿ ಪ್ರಕ್ರಿಯೆಯನ್ನಾಗಲಿ ಆಶ್ರಯಿಸುವುದು ಕಾರ್ಯಯೋಗ್ಯವಾಗುವುದಿಲ್ಲ.

**ಪೂರ್ಣಜ್ಞಾನದ ಎರಡು ಮುಖಗಳು**

ಇನ್ನೊಂದು ಮಾದರಿಯಾಗಿ ಪರ್ಯಾಯವಾದ ವೈಜ್ಞಾನಿಕ ಸೂತ್ರಗಳು ಇವೆ ಎಂಬುದನ್ನೂ ನಾವು ಮರೆಯಲು ಸಾಧ್ಯವಿಲ್ಲ. ವಿಜ್ಞಾನಕ್ಕೆ ತನ್ನದೇ ಆದ ಸೂತ್ರ ನಿರೂಪಣೆಗಳಿವೆ ಎಂಬ ಕಾರಣಕ್ಕೆ ವೇದಾಂತವು ತನ್ನ ಸೂತ್ರ ನಿರೂಪಣೆಗಳನ್ನು ಕೈಬಿಡಬೇಕಾದ ಅಗತ್ಯವಿಲ್ಲ; ಭೌತಶಾಸ್ತ್ರವು ಪ್ರತಿಯೊಂದಕ್ಕೂ ಕೆಲವು ಉಪಪರಮಾಣು (subatomic), ಮತ್ತು ಅದೃಶ್ಯವಾಗುವ ಮೂಲಭೂತ ಕಣಗಳು (particles) ಇವೆ ಎಂದು ಕಂಡುಹಿಡಿದಿರುವುದರಿಂದ ಜೀವಶಾಸ್ತ್ರವು ತಾನು ಕಂಡುಕೊಂಡಿರುವ ವರ್ಣತಂತು (chromosome) ಮತ್ತು ವಂಶವಾಹಿಗಳ(genes) ವಿಷಯದಲ್ಲಿ ತಾಳಿರುವ ತೀರ್ಮಾನಗಳನ್ನು ಕೈಬಿಡಬೇಕಾಗಿಲ್ಲ. ಅಲ್ಲದೆ ವೇದಾಂತವು ತನ್ನದೇ ಆದ ಅನುಭವಜನ್ಯ ಪ್ರತಿಪಾದನೆಗಳನ್ನು (empirical formulations) ಒಪ್ಪಿಕೊಳ್ಳಬೇಕೆಂದು ವಿಜ್ಞಾನವನ್ನು ಬಲವಂತಪಡಿಸಬೇಕಾಗಿಲ್ಲ. ವಿಜ್ಞಾನದ ಕ್ಷೇತ್ರದಲ್ಲಿ ವೈಜ್ಞಾನಿಕ ಸೂತ್ರೀಕರಣಗಳು ಪ್ರಮಾಣಬದ್ಧವಾದವು ಎಂದು ವೇದಾಂತವು ಒಪ್ಪಿಕೊಳ್ಳುತ್ತದೆ. ಹಾಗೆಯೇ ವೇದಾಂತದ ಸೂತ್ರೀಕರಣಗಳು ಪ್ರಮಾಣಬದ್ಧವಾದವು ಎಂದು ವಿಜ್ಞಾನವೂ ಒಪ್ಪಿಕೊಳ್ಳಬೇಕಾಗುತ್ತದೆ. ಈಗಾಗಲೇ ಹೇಳಿರುವಂತೆ ಒಂದು ಕ್ಷೇತ್ರದ ಪ್ರಮಾಣಕ್ಕೆ ಇನ್ನೊಂದು ಕ್ಷೇತ್ರದ ಪ್ರಮಾಣವು ಅನ್ವಯವಾಗುವುದಿಲ್ಲ. ಪ್ರತಿಯೊಂದೂ ತನ್ನ ಕ್ಷೇತ್ರದಲ್ಲಿ ಪ್ರಮಾಣಬದ್ಧವಾಗಿರುತ್ತದೆ. ಮಾನವನು ಪಡೆಯುವ ಜ್ಞಾನಕ್ಕೆ ಎರಡು ಕ್ಷೇತ್ರಗಳೂ ಪರಸ್ಪರ ಪೂರಕವಾಗಿರುತ್ತವೆ. ✪

---

**ಭಾರತೀಯ ಭಾವನೆಗಳು ಮತ್ತು ಪಾಶ್ಚಾತ್ಯ ಜಗತ್ತು**

ತಮ್ಮ *Discovery of India* ಕೃತಿಯಲ್ಲಿ ಜವಹರಲಾಲ ನೆಹರೂ ಅವರು ಹೀಗೆ ಹೇಳಿದ್ದಾರೆ: "ಪಶ್ಚಿಮ ಜಗತ್ತನ್ನು ವಿಜ್ಞಾನವು ಆಳುತ್ತಿದೆ. ಪ್ರತಿಯೊಬ್ಬರೂ ಅದಕ್ಕೆ ತಮ್ಮ ಗೌರವವನ್ನು ಸಲ್ಲಿಸುತ್ತಿದ್ದಾರೆ. ಆದರೂ ಪಶ್ಚಿಮ ಜಗತ್ತು ನಿಜವಾದ ವೈಜ್ಞಾನಿಕ ಮನೋಭಾವವನ್ನು ಇನ್ನೂ ಬೆಳಸಿಕೊಳ್ಳಬೇಕಾಗಿದೆ. ಸೃಜನಶೀಲ ಸಾಮರಸ್ಯ ಎಂಬುದಕ್ಕೆ ಜೀವವನ್ನು ತುಂಬುವ ಕೆಲಸವನ್ನು ಅದು ಇನ್ನೂ ಮಾಡಬೇಕಾಗಿದೆ. ಭಾರತದಲ್ಲಿ ನಾವು ಕ್ರಮಿಸಬೇಕಾದ ದಾರಿ ಇನ್ನೂ ಬಹಳಷ್ಟಿದೆ, ಅದರೆ ನಾವು ಎದುರಿಸಬೇಕಾದ ಅಡ್ಡಿ ಆತಂಕಗಳು ಕಡಮೆ ಸಂಖ್ಯೆಯಲ್ಲಿವೆ. ಅದಕ್ಕೆ ಕಾರಣ, ಇತ್ತೀಚಿನ ದಿನಗಳಲ್ಲಿ ಅಲ್ಲದಿದ್ದರೂ, ಪ್ರಾಚೀನ ಕಾಲದಿಂದಲೂ ಭಾರತೀಯ ಚಿಂತನೆಯ ಅತಿಮುಖ್ಯ ಆಧಾರವು ವೈಜ್ಞಾನಿಕ ಮನೋಭಾವ, ವೈಜ್ಞಾನಿಕ ದೃಷ್ಟಿ ಮತ್ತು ಅಂತಾರಾಷ್ಟ್ರೀಯತೆ—ಇವುಗಳೊಂದಿಗೆ ಸಮಶ್ರುತಿ ಹೊಂದಿದ್ದಾಗಿದೆ. ಸತ್ಯಕ್ಕಾಗಿ ನಡೆಸುವ ನಿರ್ಭಯ ಶೋಧನೆ, ಮಾನವನ ಏಕತೆ, ಪ್ರತಿಯೊಂದು ಜೀವಿಯೂ ದಿವ್ಯವಾದದ್ದು ಎಂಬ ಭಾವನೆ, ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಜೀವಿಯೂ, ಮಾನವತೆಯ ಉನ್ನತ ಸ್ತರಗಳತ್ತ ಪೂರ್ಣ ಸಹಕಾರದಿಂದ ವಿಕಾಸಗೊಳ್ಳುತ್ತಿದೆ ಎಂಬ ಭಾವನೆ—ಇವೆಲ್ಲವೂ ಈ ದೇಶದಲ್ಲಿ ಅಂತಹ ಉದಾತ್ತ ಭಾವನೆಗಳ ಬೆಳವಣಿಗೆಗೆ ಆಧಾರಗಳಾಗಿವೆ.